# ಶ್ರೇಷ್ಠ ತಂಡದ ಮೇಲೆ ಗರಿಷ್ಠ ನಿರೀಕ್ಷೆ

ಗೆಲ್ಲುವ ಸಾಮರ್ಥ್ಯ ಎಲ್ಲರಿಗೂ ಇದೆ. ಆದರೆ, ಕೈಗೊಳ್ಳುವ ನಿರ್ಧಾರ ಸರಿಯಾಗಿರಬೇಕು. ಭಾರತ ಕಂಡ ಅತ್ಯಂತ ಶ್ರೇಷ್ಠ ತಂಡವನ್ನು ನಾವೀಗ ನೋಡುತ್ತಿದ್ದೇವೆ. ಟ್ರೋಫಿ ಗೆಲ್ಲಲು ಬಲಿಷ್ಠ ಎದುರಾಳಿಯನ್ನು ಹೇಗೆ ಸದೆ ಬಡೆಯುವುದು ಎನ್ನುವ ಲೆಕ್ಕಾಚಾರ ಪ್ರತಿ ತಂಡಗಳಿಗೂ ಗೊತ್ತಿರಬೇಕು. ಬ್ಯಾಟಿಂಗ್, ಬೌಲಿಂಗ್ ಮತ್ತು ಫೀಲ್ಡಿಂಗ್ ಪರಿಪಕ್ವತೆ ಹೊಂದಿರಬೇಕು. ಆ ಶಕ್ತಿ ಈಗಿನ ಭಾರತ ತಂಡದಲ್ಲಿದೆ.

ಈ ಬಾರಿಯ ವಿಶ್ವಕಪ್‌ನಲ್ಲಿ ಹತ್ತು ತಂಡಗಳ ನಡುವೆ ನಡೆಯುತ್ತಿರುವ ಪೈಪೋಟಿ ದೊಡ್ಡದು. ಎಲ್ಲ ತಂಡಗಳು ವಿಶ್ವಕಪ್ ಗೆಲ್ಲಲು ಸಾಧ್ಯವಾಗುವುದಿಲ್ಲ. ಕ್ರಿಕೆಟ್ ಜನಕರ ನಾಡು ಇಂಗ್ಲೆಂಡ್ ಚೊಚ್ಚಿಲ ಟ್ರೋಫಿ ಗೆಲ್ಲಲು 2019ರ ತನಕ ಕಾಯಬೇಕಾಯಿತು. ವಿಶ್ವಕಪ್ ಟ್ರೋಫಿ ಗೆದ್ದ ಪಟ್ಟಿಯಲ್ಲಿ ಆಸ್ಟ್ರೇಲಿಯಾ, ಭಾರತ, ಪಾಕಿಸ್ತಾನ, ವೆಸ್ಟ್ ಇಂಡೀಸ್, ಶ್ರೀಲಂಕಾ ಹಾಗೂ ಇಂಗ್ಲೆಂಡ್ ತಂಡಗಳ ಹೆಸರಿವೆ. ಈ ಎಲ್ಲಾ ತಂಡಗಳು ತಲಾ 12 ವಿಶ್ವಕಪ್‌ಗಳಲ್ಲಿ ಆಡಿವೆ. ಆದರೆ, ಈ ಬಾರಿ ವಿಂಡೀಸ್ ಅರ್ಹತೆಯೇ ಗಳಿಸಿಲ್ಲ. ಹೀಗಾಗಿ ಉಳಿದ ಐದು ತಂಡಗಳ ನಡುವೆ ಕಠಿಣ ಪೈಪೋಟಿ ಏರ್ಪಟ್ಟರೂ ಭಾರತ ತವರಿನ ಅಂಗಳದಲ್ಲಿ ಟ್ರೋಫಿ ಗೆಲ್ಲುವ ನೆಚ್ಚಿನ ತಂಡವೆನಿಸಿದೆ.



ಟೂರ್ನಿ ಆರಂಭದ ಎರಡು ವರ್ಷ ವೆಸ್ಟ್ ಇಂಡೀಸ್ ಚಾಂಪಿಯನ್ ರಾಷ್ಟ್ರವಾಗಿ ಮೆರೆದಾಡಿತು. ಬಳಿಕ ಹಂತಹಂತವಾಗಿ ಕುಸಿತದ ಹಾದಿ ಹಿಡಿಯಿತು. ತಂಡದ ಶಕ್ತಿಯಾದ ಆಲ್‌ರೌಂಡರ್‌ಗಳ ಕೊರತೆ ಕಾಡಿತು. ಭಾರತದ 'ಕಪಿಲ್ ಡೆವಿಲ್ಸ್' ಪಡೆ 1983ರಲ್ಲಿ ಟ್ರೋಫಿ ಜಯಿಸಿ ನಮ್ಮ ದೇಶದ ಕ್ರಿಕೆಟ್‌ನಲ್ಲಿ ಹೊಸ ಶಕೆ ಆರಂಭಿಸಿದೆ. ಬಳಿಕ ಪಾಕಿಸ್ತಾನ, ಆಸ್ಟ್ರೇಲಿಯಾ, ಶ್ರೀಲಂಕಾ ಮೆರೆದವು.

1983ರ ವಿಶ್ವಕಪ್ ವೇಳೆ ಭಾರತ ತಂಡದಲ್ಲಿ ಉತ್ತಮ ಮಧ್ಯಮ ಕ್ರಮಾಂಕದ ಪಡೆ ಇತ್ತು. ಆಲ್‌ರೌಂಡರ್‌ಗಳ ಬೆಂಚ್ ಸ್ಟ್ರೆಂಥ್ ಇತ್ತು. 2011ರಲ್ಲಿ ಟ್ರೋಫಿ ಎತ್ತಿ ಹಿಡಿದಾಗ ಮಹೇಂದ್ರ ಸಿಂಗ್ ಧೋನಿ ನಾಯಕತ್ವದ ತಂಡ ಎಲ್ಲಾ ವಿಭಾಗದಲ್ಲಿ ಬಲಿಷ್ಠವಾಗಿತ್ತು. ಈಗಿನ ತಂಡದಲ್ಲಿ ಉತ್ತಮ ಆರಂಭಿಕ ಬ್ಯಾಟ್ಸ್‌ಮನ್‌ಗಳು, ಚೆಂಡನ್ನು ವೇಗವಾಗಿ ಎಸೆಯಬಲ್ಲ ಸಾಮರ್ಥ್ಯವಿರುವ ಆಟಗಾರರು, ಜಗತ್ತಿನ ಯಾವುದೇ ತಂಡವನ್ನು ಮಣಿಸಬಲ್ಲ ಶಕ್ತಿ ಹೊಂದಿರುವ ಆಟಗಾರರು ಇದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ತಾಯ್ನಾಡಿನಲ್ಲಿ ಪ್ರೇಕ್ಷಕರ ಬಲ ಆಟಗಾರರ ಮನೋಸ್ಥೈರ್ಯ ಹೆಚ್ಚಿಸಲಿದೆ.

ಈಗಿನ ಸ್ಪರ್ಧಾತ್ಮಕತೆಯ ಸವಾಲಿನಲ್ಲಿ ಒಬ್ಬ ಆಟಗಾರ ಗಾಯದ ಸಮಸ್ಯೆ ಅಥವಾ ಪ್ರದರ್ಶನ ಕೊರತೆಯಿಂದಾಗಿ ತಂಡದಿಂದ ಹೊರಗಡೆ ಉಳಿದುಕೊಂಡರೆ ಮತ್ತೆ ತಂಡದಲ್ಲಿ ಸ್ಥಾನ ಪಡೆದುಕೊಳ್ಳುವುದು ಕಷ್ಟವಿದೆ. ಇದರರ್ಥ ಇನ್ನೊಬ್ಬ ಆಟಗಾರ ಅವಕಾಶಕ್ಕಾಗಿ ಕಾದು ನಿಂತಿದ್ದಾನೆ ಎನ್ನುವುದು. ಮೊದಲಾದರೆ ಮಹತ್ವದ ಟೂರ್ನಿಗೆ ಸಜ್ಜಾಗುವಂತೆ ತಿಂಗಳು ಮೊದಲೇ ಹೇಳಬೇಕಿತ್ತು. ಈಗ ಬದಲಿ ಆಟಗಾರನ ಆಯ್ಕೆ ಕ್ಷಣಾರ್ಧದಲ್ಲಿ ಸಾಧ್ಯ. ಅಷ್ಟೊಂದು ಬೆಂಚ್‌ಸ್ಟ್ರೆಂಥ್ ಭಾರತದಲ್ಲಿದೆ. ಗಾಯಾಳುಗಳ ಸಮಸ್ಯೆಯಿದ್ದರೂ ಮೆಟ್ಟಿ ನಿಲ್ಲುವ ಸಾಮರ್ಥ್ಯ ಭಾರತ ತಂಡಕ್ಕಿದೆ. ವಿಶ್ವಕಪ್ ತಂಡಕ್ಕೆ ಆಯ್ಕೆಯಾಗಿರುವ ಬಹುತೇಕ ಆಟಗಾರರು ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಗರಡಿಯಲ್ಲಿ ಪಳಗಿದವರು. ಹೀಗಾಗಿ ಯಾರ ಸಾಮರ್ಥ್ಯ ಹೇಗೆ ಬಳಸಿಕೊಳ್ಳಬೇಕು ಎನ್ನುವ ಗುಟ್ಟು ಅವರಿಗೆ ತಿಳಿದಿದೆ.

-ರಾಘವೇಂದ್ರ ಪ್ರಭು, ಕ್ರಿಕೆಟ್ ವಿಶ್ಲೇಷಕರು



ಟ್ರೋಫಿ ಗೆಲ್ಲುವ ನಿಟ್ಟಿನಲ್ಲಿ ಭಾರತಕ್ಕೆ ಸಕಾರಾತ್ಮಕ ಅಂಶಗಳು ಇರುವಂತೆ, ತಂಡದಲ್ಲಿ ಹಲವು ಸಮಸ್ಯೆಗಳೂ ಇವೆ. ಸೂರ್ಯಕುಮಾರ್ ಯಾದವ್ ಏಕದಿನ ತಂಡಕ್ಕೆ ಫಿಟ್ ಆಗಿದ್ದಾರೆಯೇ ಎನ್ನುವ ಪ್ರಶ್ನೆಗಿನ್ನೂ ಉತ್ತರ ಸಿಕ್ಕಿಲ್ಲ. ಅಕ್ಷರ್ ಪಟೇಲ್ ಮತ್ತು ಶ್ರೇಯಸ್ ಅಯ್ಯರ್ ಅವರಿಗೆ ಗಾಯದ ಸಮಸ್ಯೆಗಳು ಕಾಡುತ್ತಿದೆ. ಜಸ್‌ಪ್ರೀತ್ ಬೂಮ್ರಾ ತಮ್ಮ ಎಂದಿನ ಲಯದಲ್ಲಿ ಬೌಲಿಂಗ್ ಮಾಡಿದ್ದರೂ, ಏಷ್ಯಾಕಪ್‌ನಲ್ಲಿ ಒಮ್ಮೆಯೂ ತಮ್ಮ ಪಾಲಿನ ಪೂರ್ಣ ಹತ್ತು ಓವರ್ ಬೌಲಿಂಗ್ ಮಾಡಿಲ್ಲ.

ಬೆನ್ನು ನೋವಿನ ಸೆಳೆತದಿಂದಾಗಿ ಆರು ತಿಂಗಳು ವಿಶ್ರಾಂತಿ ಪಡೆದಿದ್ದ ಶ್ರೇಯಸ್ ಅಯ್ಯರ್ ಏಷ್ಯಾಕಪ್‌ನಲ್ಲಿ ಮೊದಲ ಎರಡು ಪಂದ್ಯಗಳಲ್ಲಿ ಮಾತ್ರ ಆಡಿದರು. ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಎಡಭುಜದ ನೋವಿನ ಕಾರಣದಿಂದಾಗಿ ಫೈನಲ್ ಪಂದ್ಯದಿಂದ ಹೊರಗುಳಿಯಬೇಕಾಯಿತು. ಇವರಿಬ್ಬರೂ ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆದಿದ್ದು, ಮಹತ್ವದ ಟೂರ್ನಿಯ ವೇಳೆ ಗಾಯಾಳುಗಳ ಸಮಸ್ಯೆ ಕಾಡುವ ಆತಂಕವಿದೆ. ಇದನ್ನು ಭಾರತ ತಂಡದ ಕೋಚ್ ರಾಹುಲ್ ದ್ರಾವಿಡ್ ಕೂಡ ಹೇಳಿದ್ದಾರೆ. 'ವಿಶ್ವಕಪ್ ಸಮೀಪದಲ್ಲಿರುವಾಗ ಗಾಯದ ಸಮಸ್ಯೆಗಳಿಗೆ ನಾವು ದೊಡ್ಡ ಬೆಲೆಯನ್ನೇ ತೆರಬೇಕಾಗಬಹುದು. ನಾವೀಗ ಸಂದಿಗ್ಧ ಸ್ಥಿತಿಯಲ್ಲಿದ್ದು, ಕೆಲವು ಆಟಗಾರರಿಗೆ ವಿಶ್ರಾಂತಿ ನೀಡಬೇಕಾಗಿದೆ. ಇನ್ನೂ ಕೆಲವು ಹುಡುಗರನ್ನು ಅನಿವಾರ್ಯವಾಗಿ ಆಡಿಸಬೇಕಾಗಿದೆ' ಎಂದು ಹೇಳಿದ್ದಾರೆ.



ಬ್ಯಾಟಿಂಗ್ ಜೊತೆಗೆ ತಂಡವನ್ನೂ ಮುನ್ನಡೆಸುವ ಜವಾಬ್ದಾರಿ ಹೊತ್ತಿರುವ ರೋಹಿತ್ ಶರ್ಮಾ